ದಾವಣಗೆರೆಯಲ್ಲಿ ಸರ್ಕಾರಿ ಪದವಿ ಕಾಲೇಜು ಪ್ರಾರಂಭಿಸುವ ಬಗ್ಗೆ

೬೪೭. ಶ್ರೀ ವೈ. ಎಂ. ವೀರಣ್ಣ (ದಾವಣಗೆರೆ).—ಮಾನ್ಯ ಕೃಷಿ ಹಾಗೂ ತೋಟಗಾರಿಕೆ, ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಾವಣಗೆರೆಯಲ್ಲಿ ಸರ್ಕಾರಿ ಪದವಿ ಕಾಲೇಜು ತೆರೆಯಬೇಕೆಂಬ ಮನವಿಗಳು ಸರ್ಕಾರಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಕಾಲೇಜನ್ನು ತೆರೆಯಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ಹಾಗೂ ಒಂದು ಮಹಿಳಾ ಕಾಲೇಜನ್ನಾದರೂ ಸ್ಥಾಪಿಸಲಾಗುವುದೆ ?

ಶ್ರೀ ಕೆ. ಹೆಚ್. ರಂಗನಾಥ್ (ಕೃಷಿ, ತೋಟಗಾರಿಕೆ ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು) —

ಅ) ಹೌದು.

ಆ) ದಾವಣಗೆರೆಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ತೆರೆಯಲು ಸರ್ಕಾರಕ್ಕೆ ಸಾಧ್ಯವಿಲ್ಲ.

ಶ್ರೀ ವೈ. ಎಂ. ವೀರಣ್ಣ.—ಸನ್ಮಾನ್ಯ ಸಭಾಧ್ಯಕ್ಷರೆ. ದಾವಣಗೆರೆ ನಗರದಲ್ಲಿ ಸರ್ಕಾರಿ ಮಹಿಳಾ ಪದವಿ ಕಾಲೇಜನ್ನು ತೆರೆಯಬೇಕೆಂದು ಮಾನ್ಯ ಶಿಕ್ಷಣ ಮಂತ್ರಿಗಳಲ್ಲಿ ನಾವು ವಿನಂತಿಸಿಕೊಂಡಿದ್ದೇವೆ. ಈಗಾಗಲೇ ತಮಗಲ್ಲಾ ಗೊತ್ತಿರುವಂತೆ, ದಾವಣಗೆರೆ ವಿದ್ಯಾ ಕ್ಷೇತ್ರದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿದೆ. ಅಲ್ಲಿ ವಿದ್ಯಾರ್ಥಿನಿಯರ ಸಂಖ್ಯೆ ಜಾಸ್ತಿಯಾಗಿರುವುದರಿಂದ ಒಂದು ಮಹಿಳಾ ಪದವಿ ಕಾಲೇಜು ಅತ್ಯವಶ್ಯಕವಾಗಿ ಆಗಬೇಕಾಗಿರುತ್ತದೆ. ಮತ್ತು ದಾವಣಗೆರೆಯ ಜನ ಸಂಖ್ಯೆಯೂ ಜಾಸ್ತಿಯಾಗಿದೆ. ಊರಿನ ಹಳೆಯ ಭಾಗದಲ್ಲಿ ಯಾವ ಒಂದು ಮಹಿಳಾ ಕಾಲೇಜು ಇಲ್ಲ. ಊರಿನ ಮಧ್ಯ ಭಾಗದಲ್ಲಿ ರೈಲ್ವೆ ಟ್ರಾಕ್ಟರ್ ಹಾದು ಹೋಗಿದೆ. ಊರಿನ ವಿದ್ಯಾರ್ಥಿನಿಯರು ಊರಿನ ಹೊಸ ಬಡಾವಣೆಗೆ ಹೋಗಿ, ಪದವಿ ಕಾಲೇಜಿಗೆ ಹೋಗ ಬೇಕಾದಂಥ ಸಂದರ್ಭ ಇದೆ. ಮತ್ತು ವಿದ್ಯಾರ್ಥಿನಿಯರ ಸಂಖ್ಯೆ ಅತಿ ಹೆಚ್ಚಾಗಿರುವುದರಿಂದ ಊರಿನ ಮಧ್ಯ ಭಾಗದಲ್ಲಿ ಒಂದು ಸರ್ಕಾರಿ ಮಹಿಳಾ ಪದವಿ ಕಾಲೇಜು ಆಗಬೇಕಾಗಿರತಕ್ಕ ಅಥಾದ್ದ ಅತ್ಯಗತ್ಯವಾಗಿರುವುದರಿಂದ ಅದು ಆಗಬೇಕೆಂದು ಸದನದ ಮೂಲಕ ಮಾನ್ಯ ಶಿಕ್ಷಣ ಮಂತ್ರಿಗಳನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಸಾಧ್ಯವಿಲ್ಲ ವೆನ್ನುವ ಮಾತನ್ನು ಹೇಳಿದ್ದಾರೆ. ಆದ್ದರಿಂದ ಇದನ್ನು ಪುನರ್ ಪರಿಶೀಲಿಸಿ ಆಗುವಂಥ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಈ ಮೂಲಕ ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು —ಮಾನ್ಯ ಸದಸ್ಯರು ಪದವಿ ಕಾಲೇಜಿನ ಬಗ್ಗೆ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಇದನ್ನು ಪಿಟಿಷನ್ ಟೈಮ್‌ನಲ್ಲಿ ಮಾಡಿ.

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಮಾನ್ಯ ಅಧ್ಯಕ್ಷರೆ, ದಾವಣಗೆರೆಯಲ್ಲಿ ಫಸ್ಟ್ ಗ್ರೇಡ್ ಕಾಲೇಜುಗಳು, ಖಾಸಗಿ ಕಾಲೇಜುಗಳು ಸಾಕಷ್ಟು ಇವೆ. ಅಂದರೆ ಮಹಿಳಾ ಕಾಲೇಜು ಇದೆ, ಮತ್ತು ಹುಡುಗರ ಕಾಲೇಜು ಇದೆ. ಆದರೆ ಈ ಪ್ರೈವೇಟ್ ಕಾಲೇಜಿನಲ್ಲಿ ಹೆವಿ ಫೀಸ್ ಡೊನೇಷನ್ ಇರುವುದರಿಂದ ಬಡ ಹುಡುಗರು ಆ ಕಾಲೇಜುಗಳಲ್ಲಿ ಎಂಟರ್ ಆಗಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅಲ್ಲಿ ಒಂದು ಸರ್ಕಾರಿ ಕಾಲೇಜನ್ನು ತೆರೆಯುವ ಬಗ್ಗೆ ಸರ್ಕಾರ ಪರಿಶೀಲನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ನ್ಯಾಮಿ ತಮಗೆ ತಿಳಿದಿರುವ ಹಾಗೆ, ಇವತ್ತಿನ ಸರ್ಕಾರದ ಹಣಕಾಸಿನ ಪರಿಸ್ಥಿತಿಯಲ್ಲಿ ಹೌದು ಅಥವಾ ಆಗಲಿ ಎಂದು ಹೇಳುವುದು ಬಹಳ ಕಷ್ಟದ ವಿಚಾರ. ಮಾನ್ಯ ಉಪಾಧ್ಯಕ್ಷರು ಪ್ರಸ್ತಾಪ ಮಾಡಿರತಕ್ಕ ವಿಚಾರವನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳುತ್ತದೆ, ಸಮಯ ಬಂದಾಗ ನೋಡೋಣ.

ಕಾಡಾನೆಗಳ ಹಾವಳಿ

೬೭೪. ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) —ಮಾನ್ಯ ಕೃಷಿ ಹಾಗೂ ತೋಟಗಾರಿಕೆ, ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಾಡಾನೆಗಳ ಹಾವಳಿಯಿಂದ ರಾಜ್ಯದಲ್ಲಿ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?